ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂಗಳ ನ್ಯಾಯಾಲಯ, ಚಿಕ್ಕೋಡಿ

24 ನೇ ಜೂನ್ 2023

ಸಿ.ಸಿ.ನಂಃ 615/2016

ಪಿರ್ಯಾದಿಃ 1) ಕರ್ನಾಟಕ ಸರ್ಕಾರ
(ಚಿಕ್ಕೋಡಿ ಪೋಲಿಸ ಠಾಣೆ)

ವಿರುದ್ದ

ಆರೋಪಿತರುಃ 1) ಇಮ್ರಾನ ಮೋದಿನ ಅರ್ಕಾಟೆ,
ವಃ 29 ವರ್ಷ, ಉಃ
ವಾಸಃ ಹೊಸಪೇಟ ಗಲ್ಲಿ, ಚಿಕ್ಕೋಡಿ,

2) ಅನೀತಾ ವಿಕ್ರಮ ಬಾನಗೆ,
ವಯಸ್ಸುಃ ವಯಸ್ಸರ, ಸಾಃ ಹಿರೇಕೊಡಿ,
ತಾಃ ಚಿಕ್ಕೋಡಿ, ಜಿಲ್ಲೆಃ ಬೆಳಗಾವಿ.

3) ವಿಕ್ರಮ ಅಶೋಕ ಬಾನಗೆ,
ವಯಸ್ಸುಃ 37 ವರ್ಷ, ಸಾಃ ಹಿರೇಕೋಡಿ,
ತಾಃ ಚಿಕ್ಕೋಡಿ, ಜಿಲ್ಲೆಃ ಬೆಳಗಾವಿ.

4) ಮೌಲಾ ಉಮರ ಮಾಂಜರೆಕರ,
ವಯಸ್ಸುಃ 36 ವರ್ಷ, ಸಾಃ ಹಿರೇಕೋಡಿ,
ತಾಃ ಚಿಕ್ಕೋಡಿ, ಜಿಲ್ಲೆಃ ಬೆಳಗಾವಿ.

ದೋಷಾರೋಪಣೆ

ನಾನು ಶ್ರೀ.ನಾಗೇಶ ಪಾಟೀಲ ಬಿ.ಕಾಂ. ಎಲ್.ಎಲ್.ಬಿ., ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನಾಯಾಲಯ, ಚಿಕ್ಕೋಡಿ, ಆದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಯನ್ನ ಹೊರೆಸುವುದೇನೆಂದರೆಃ

1) ಚಿಕ್ಕೋಡಿ ಪೋಲಿಸ್ ಠಾಣೆ ಹದ್ದೀಯ ಝಾರಿ ಗಲ್ಲಿಯ ಕಮಾನ ಎದುರುಗಡೆ ಚಿಕ್ಕೋಡಿ-ಹಿರೇಕೋಡಿ ರಸ್ತೆಯ ಪಶ್ಚಿಮ ಬದಿಯಲ್ಲಿ ದಿನಾಂಕಃ 9-02-2016 ರಂದು ಮಧ್ಯಾಹ್ನ 12-00 ಗಂಟೆಗೆ ಆರೋಪಿತರಾದ ನೀವು ಅಕ್ರಮವಾಗಿ ಚುನಾವಣೆ ಅಧಿಕಾರಿಗಳು ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 171 (ಇ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಿಲ್ಲಾ ಪಂಚಾಯತ ಮತ್ತು ತಾಲ್ಲೂಕ ಪಂಚಾಯತ ಚುನಾಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿಗೆ ಮತ ಹಾಕುವ ಸಲುವಾಗಿ, ಆಮೀಷ ಒಡ್ಡಲು ರಾಗಾ ಗೋಲ್ಡ್ ಕಂಪನಿಯ 1 ಲೀ. ಎಣ್ಣೆಯ ಪ್ಯಾಕೇಟಗಳ 195 ರಟ್ಟಿನ ಬ್ಯಾಕ್ಸಗಳನ್ನು ಲೋಡ ಮಾಡಿಕೊಂಡು ವಿತರಣೆ ಮಾಡಲಿಕ್ಕೆ ಒಯ್ಯುವಾಗ ಮಾಲು ಸಮೇತ ಸಿಕ್ಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 188 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಿಲ್ಲಾ ಪಂಚಾಯತ ಮತ್ತು ತಾಲ್ಲೂಕ ಪಂಚಾಯತ ಚುನಾಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿಗೆ ಮತ ಹಾಕುವ ಸಲುವಾಗಿ ಆಮೀಷ ಒಡ್ಡಲು ರಾಗ ಗೋಲ್ಡ ಕಂಪನಿಯ 1 ಲೀ. ಎಣ್ಣೆಯ ಪ್ಯಾಕೇಟಗಳ 195 ರಟ್ಟಿನ ಬ್ಯಾಕ್ಸಗಳನ್ನು ಲೋಡ ಮಾಡಿಕೊಂಡು ವಿತರಣೆ ಮಾಡಲಿಕ್ಕೆ ಒಯ್ಯುವಾಗ ಮಾಲು ಸಮೇತ ಸಿಕ್ಕಿ ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 123 ಆರ್. ಪಿ. ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಸದರಿ ಮೇಲ್ಕಂಡ ದೋಷಾರೋಪಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ ಮತ್ತು ಸದರಿ ದೋಷಾರೋಣೆಗಳಿಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗವುದು.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ/ತರಿಗೆ ಕನ್ನಡ/ ಮರಾಠಿ/ ಹಿಂದಿ ಭಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ/ಗಳು ನೀಡಿದ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢೀಕರಿಸಿದೆ.)

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.